eISBN: 978-81-686924-4-2

# CHAPTER-34
# ಕಡಕೋಳ ಮಡಿವಾಳಪ್ಪನ ತತ್ವಪದಗಳಲ್ಲಿ ವಿಭಕ್ತಿ ಪ್ರತ್ಯಯಗಳು

Yallappa H Bakli
Research Scholar, Dept of Kannada, Central University of Karnataka
Yhbakli72@gmail.com
https://doi.org/10.66483/jsp.2026.001.ch34

ಕನ್ನಡ ಸಾಹಿತ್ಯ ಮತ್ತು ತತ್ವಪದಗಳ ಮೇಲೆ ವಿವಿಧ ಮಗ್ಗಲುಗಳಿಂದ ಅಧ್ಯಯನಗಳು ನಡೆದಿವೆ. ಆದರೆ ತತ್ವಪದಗಳ ಭಾಷೆಯ ಮೇಲೆ ವಿವರವಾದ ಅಧ್ಯಯನಗಳು ನಡೆದಿರುವುದಿಲ್ಲ. ಆದ್ದರಿಂದ ತತ್ವಪದಗಳನ್ನು ಭಾಷಿಕವಾಗಿ ಅಧ್ಯಯನ ಮಾಡುವುದರಿಂದ ಭಾಷೆಯ ಐತಿಹಾಸಿಕ ಬೆಳವಣಿಗೆ, ಭಾಷೆಯ ಒಳನುಡಿ ಅದರ ಆಂತರಿಕ ರಚನೆ, ಭಾಷೆಯ ಬದಲಾವಣೆ, ಭಾಷೆ ಮತ್ತು ಸಮಾಜದ ಸಂಬಂಧ, ಆ ಕಾಲದ ಭಾಷೆಯನ್ನು ತಿಳಿದುಕೊಳ್ಳಲು ಹೀಗೆ ಮುಂತಾದ ಉದ್ದೇಶಗಳನ್ನು ಇಟ್ಟುಕೊಂಡು ತತ್ವಪದ ಸಾಹಿತ್ಯ ಭಾಷೆಯನ್ನು ತಿಳಿಯುವುದು ಅಗತ್ಯವಿದೆ. ತತ್ವಪದಗಳು ೧೭ನೇ ಶತಮಾನದಲ್ಲಿ ಪ್ರಾರಂಭವಾಗಿ ೧೮, ೧೯ನೇ ಶತಮಾನದಲ್ಲಿ ಹೆಚ್ಚು ಬೆಳೆದು ಇಲ್ಲಿವರೆಗೂ ಮುಂದುವರೆದುಕೊಂಡು ಬಂದಿವೆ. ಕಡಕೋಳ ಮಡಿವಾಳಪ್ಪನವರು ಸ್ಥಳೀಯ ಪ್ರಾದೇಶಿಕ ಭಾಷೆ ಬಳಿಸಿಕೊಂಡು ಸಾಮಾನ್ಯ ಜನರಿಗೆ ಅರ್ಥವಾಗುವ ಸರಳ ಭಾಷೆಯಲ್ಲಿ ತತ್ವಪದಗಳನ್ನು ರಚಿಸಿದರು. ಇವರ ಆಯ್ದ ತತ್ವಪದಗಳನ್ನು ತೆಗೆದುಕೊಂಡು ವರ್ಣನಾತ್ಮಕ ಭಾಷಾವಿಜ್ಞಾನದ ಸಿದ್ಧಾಂತಗಳನ್ನು ಬಳಸಿಕೊಂಡು ವಿಭಕ್ತಿ ಪ್ರತ್ಯಯಗಳನ್ನು ಭಾಷಿಕವಾಗಿ ಅಧ್ಯಯನ ಮಾಡಲಾಗಿದೆ.

ತತ್ವ ಎಂದರೆ ಸಿದ್ಧಾಂತ. ಪರಮಾತ್ಮನ ನಿಜಸ್ಥಿತಿ ಎಂದರ್ಥವಾಗುತ್ತದೆ. ಸಿದ್ಧಾಂತವನ್ನು ಹಾಡಿನ ಮೂಲಕ ಅಭಿವ್ಯಕ್ತಿಸುವ ಕ್ರಿಯೆಗೆ ತತ್ವಪದ ಎನ್ನುವರು.

ಒಂದು ವಾಕ್ಯದಲ್ಲಿ ನಾಮಪದ ಮತ್ತು ಕ್ರಿಯಾಪದಕ್ಕೆ ಇರುವ ಸಂಬಂಧವನ್ನು ಹೇಳಲು ನಾಮಪದಗಳೊಂದಿಗೆ ಬರುವ ಪ್ರತ್ಯಯಗಳಿಗೆ ವಿಭಕ್ತಿಪ್ರತ್ಯಯ ಎನ್ನುವರು. ವಿಭಕ್ತಿ ಪ್ರತ್ಯಯಗಳಿಗೆ ಸ್ವತಂತ್ರವಾದ ಅರ್ಥ ಇರುವುದಿಲ್ಲ. ಇವು ನಾಮಪದ, ಸರ್ವನಾಮ, ವಿಶೇಷಣ, ಭಾವನಾಮಗಳಿಗೆ ಸೇರಿ ಬಳಕೆಯಾಗುತ್ತವೆ. ಕನ್ನಡದಲ್ಲಿ ಒಟ್ಟು ಏಳು ವಿಭಕ್ತಿ ಪ್ರತ್ಯಯಗಳು ಆರು ಕಾರಕ ಸಂಬಂಧವನ್ನು ವಿದ್ವಾಂಸರು ಗುರುತಿಸಿದ್ದಾರೆ. ಅವುಗಳನ್ನು ಕೆಳಗೆ ಕೊಡಲಾಗಿದೆ.

ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ ಹಾಗೂ ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು ಸಂಯೋಗದಲ್ಲಿ ಸುಮಾರು ಐವತ್ತು ತತ್ವಪದಗಳ ಸಂಪುಟವನ್ನು ಹೊರತಂದಿದ್ದಾರೆ. ಅದರಲ್ಲಿ ತತ್ವಪದ ಸಂಪುಟ ೩ರಲ್ಲಿ ಕಡಕೋಳ ಮಡಿವಾಳಪ್ಪ ಮತ್ತು ಆತನ ಶಿಷ್ಯರ ತತ್ವಪದಗಳು ಎನ್ನುವ ಶೀರ್ಷಿಕೆಯ ಮುಖಾಂತರ ಮೀನಾಕ್ಷಿ ಬಾಳಿಯವರು ಸಂಪಾದಿಸಿದ ಪುಸ್ತಕವು ಮುಖ್ಯ ಆಕರವಾಗಿದೆ. ಈ ಪುಸ್ತಕದಿಂದ ಇಪ್ಪತ್ತು ಆಯ್ದ ತತ್ವಪದಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

ಆಯ್ದುಕೊಂಡಿರುವ ತತ್ವಪದಗಳಲ್ಲಿ ಬಳಕೆಯಾಗಿರುವ ವಿಭಕ್ತಿ ಪ್ರತ್ಯಯಗಳನ್ನು ಕೆಳಗೆ ಪಟ್ಟಿ ಮಾಡಿದೆ.

| | ವಿಭಕ್ತಿ ಪ್ರತ್ಯಯ | ಕಾರಕ |
|---|---|---|
| ೧) ಪ್ರಥಮ | ø ಯಾವುದೇ ಪ್ರತ್ಯಯವಿಲ್ಲ | ಕರ್ತೃ |
| ೨) ದ್ವಿತೀಯಾ | -ಅನ್ನು, -ಅನು, -ನ | ಕರ್ಮ |
| ೩) ತೃತೀಯಾ | -ಇಂದ, -ಲಿ, -ಲೆ | ಕರಣ |
| 4) ಚತುರ್ಥಿ | -ಇಗೆ, -ಗೆ, -ಕ್ಕೆ | ಸಂಪ್ರದಾನ |
| 5. ಪಂಚಮಿ | -ಇಂದ, -ಲಿಂದ | ಅಪದಾನ |

eISBN: 978-81-686924-4-2

6. ಷಷ್ಠಿ -ಅ, -ಇನ ಸಂಬಂಧ

೭) ಸಪ್ತಮಿ -ಅಲಿ, -ಅಲ್ಲಿ, -ಆಗ, -ಇಲಿ, -ಒಳು ಅಧಿಕರಣ
-ಒಳಗೆ, -ಕ

ಸಂಬಂಧವನ್ನು ಬಿಟ್ಟು ಉಳಿದವಕ್ಕೆ ಕಾರಕ ಎನ್ನುವರು. ಕಾರಕ ಎಂದರೆ ಕ್ರಿಯೆಯನ್ನು ಮಾಡುವುದು. ತತ್ವಪದಗಳಲ್ಲಿ ಹಲವು ವಿಭಕ್ತಿ ಪ್ರತ್ಯಯಗಳು ಬಳಕೆಯಾಗಿವೆ. ಈ ಪ್ರತ್ಯಯಗಳನ್ನು ಈ ಲೇಖನದಲ್ಲಿ ತೋರಿಸಿದೆ.

**ವಿಭಕ್ತಿ ಪ್ರತ್ಯಯಗಳು**

**ಪ್ರಥಮ ವಿಭಕ್ತಿ:** ಕನ್ನಡ ಭಾಷಾವಿಜ್ಞಾನದ ವಿದ್ವಾಂಸರು ಪ್ರಥಮ ವಿಭಕ್ತಿಗೆ ಯಾವುದೇ ಪ್ರತ್ಯಯವು ಇಲ್ಲ. ಒಂದು ನಾಮಪದವು ತನ್ನಷ್ಟಕ್ಕೆ ಅದು ಪ್ರತ್ಯಯವಾಗಿ ನಿಲ್ಲುತ್ತದೆ ಎಂದು ತಿಳಿಸುತ್ತಾರೆ. ಪ್ರಥಮ ವಿಭಕ್ತಿ ಪ್ರತ್ಯಯವನ್ನು ಈ ಚಿನ್ಹೆ ø (ಶೂನ್ಯ) ಮೂಲಕ ಗುರುತಿಸುತ್ತೇವೆ. ಇದಕ್ಕೆ ಕರ್ತೃ ಕಾರಕ ಎಂದು ಕರೆಯುತ್ತಾರೆ. ಒಂದು ವಾಕ್ಯದಲ್ಲಿ ಕೆಲಸ ಮಾಡುವರನ್ನು ಕುರಿತು ತಿಳಿಸುವುದು. ಕಾರ್ಯದಲ್ಲಿ ತೊಡಗಿಕೊಂಡವರು ವ್ಯಕ್ತಿಯಾದರೆ ಯಾರು? ವಸ್ತುವಾಗಿದ್ದರೆ ಯಾವುದು? ಎಂದು ಪ್ರಶ್ನೆಮಾಡುವುದಾಗಿದೆ. ನಾಮಪ್ರಕೃತಿ ಯಾವುದೇ ಪ್ರತ್ಯಯ ಸೇರಿಸಿಕೊಳ್ಳದೆ ತತ್ವಪದಗಳಲ್ಲಿ ನಾಮಪದಗಳು ಸ್ವರಾಂತ್ಯದಿಂದ ಬಳಕೆಯಾಗುತ್ತವೆ. ತತ್ವಪದಲ್ಲಿ 'ಅ' ಕಾರ, 'ಇ' ಕಾರ, 'ಉ' ಕಾರದಿಂದ ಮುಗಿಯುವ ಪದರಚನೆಗಳು ಸಿಗುತ್ತವೆ. ಈ ಕೆಳಗಿನಂತೆ ತೋರಿಸಲಾಗಿದೆ.

ಉದಾಹರಣೆ:

ಕಡಲ ದ್ರವ್ಯ ನೀ ಬಚ್ಚಿಟ್ಟ ೨೪.೭
ಮನಿ ಹೆಂಡತಿ ಆದಳು ಜಾರಿ | 2.6
ಸೂಳಿ ಚೋಳಿಯೆಂಜಲ ತಿಂದ| 1.4.
ಸಿಂಧು ಮರಾಳನ್ನ ಓಡಿಸಿ ನಿಂದ ೧.೧೨

**ದ್ವಿತೀಯಾ ವಿಭಕ್ತಿ**: ಈ ವಿಭಕ್ತಿ ಪ್ರತ್ಯಯವು ಕರ್ಮ ಕಾರಕವನ್ನು ತಿಳಿಸುತ್ತದೆ. ತತ್ವಪದಗಳಲ್ಲಿ -ಅನು, -ಅನ್ನು, -ನ ಪ್ರತ್ಯಯಗಳನ್ನು ಹೊಂದಿದೆ. ಇದಕ್ಕೆ ಆಗುಗ ಎಂದು ಸಹ ಹೇಳುವರು. ಒಂದು ವಾಕ್ಯದಲ್ಲಿ ಬರುವ ಒಂದು ವಸ್ತು, ಅಥವಾ ವ್ಯಕ್ತಿಯು ಕೆಲಸಕ್ಕೆ ಒಳಪಡಿಸುವ ವಿಷಯವನ್ನು ಹೇಳುತ್ತದೆ ಈ ವಿಭಕ್ತಿ ರೂಪವು ಆಯ್ದ ತತ್ವಪದಗಳಲ್ಲಿ ಕೆಳಗೆ ತೋರಿಸಿದಂತೆ ಕಂಡುಬರುತ್ತವೆ.

ಉದಾಹರಣೆ:

-ಅನು:

ನಿಜ+ ವ್ + ಅನು = ನಿಜವನು ೧೭.೩.೪
ದೇಹ+ ವ್ + ಅನು = ದೇಹವನು ೧೯.೫.೩
ಕುಲ+-ವ್-+-ಅನು = ಕುಲವನು 20.13.1

-ಅನ್ನು:

ಕರುಣೆ+-ಯ್-+ ಅನ್ನು = ಕರುಣೆಯನ್ನು ೨೭.೮.೨

-ನ:

ಮನುಷ್ಯ+ನ = ಮನುಷ್ಯನ ೧೧.೭.೨
ಆತ್ಮ+-ನ = ಆತ್ಮನ ೨೯.೫.೪

**ತೃತೀಯಾ ವಿಭಕ್ತಿ:** ಇದು ಕರಣ ಕಾರಕವನ್ನು ಹೊಂದಿದ್ದು ಕ್ರಿಯೆಗೆ ಗುರಿಯಾಗುವ ಸಾಮಗ್ರಿಯನ್ನು ಅಥವಾ ಸಾಧನವನ್ನು ತಿಳಿಸುತ್ತದೆ. ತತ್ವಪದದಲ್ಲಿ -ಇಂದ. -ಲಿ. -ಲೆ ಎಂಬ ವಿಭಕ್ತಿ ಪ್ರತ್ಯಯಗಳು ತೃತೀಯಾ ವಿಭಕ್ತಿಪ್ರತ್ಯಯವಾಗಿ ಬಳಕೆಯಾಗಿವೆ. 'ಅ' ಕಾರದಿಂದ ಮುಗಿಯುವ ಪದಗಳಿಗೆ 'ದ' ಕಾರವು ಆಗಮವಾಗಿ ಬರುತ್ತದೆ. 'ಉ' ಕಾರಂತ ಸ್ವರವು 'ಇ' ಕಾರವಾಗಿ ಬದಲಾಗುತ್ತದೆ.

ಉದಾಹರಣೆ:

-ಇಂದ

ದಯ+-ದ್-+ಇಂದ+-ಎ = ದಯದಿಂದ ೬.೨೪.೨

-ಲಿ

ಘಾಸಿ+-ಲಿ = ಘಾಸಿಲಿ 29.33.1.

-ಇಲೆ

ಕೆರು+ಕಾಲು+-ಇಲೆ = ಕೆರುಗಾಲಿಲೆ 4.11.2.

'ಉ' ಕಾರಾಂತ ಸ್ವರವು 'ಇ' ಕಾರವಾಗಿ ಬದಲಾಗುತ್ತದೆ.

ನಿರಾಶಿ+-ಲೆ = ನಿರಾಶಿಲೆ 29.30.1.

**ಚತುರ್ಥಿ ವಿಭಕ್ತಿ:** ಈ ವಿಭಕ್ತಿಯು ಸಂಪ್ರದಾನ ಕಾರಕವಾಗಿದೆ. ಇದು ಇಗೆ. -ಕೆ. -ಕ್ಕೆ, -ಗೆ ಎಂಬ ಪ್ರತ್ಯಯಗಳು ಚತುರ್ಥಿ ವಿಭಕ್ತಿ ಪ್ರತ್ಯಯಗಳಾಗಿ ಬಳಕೆಯಾಗಿವೆ. ಇವು ಕೆಲಸದ ಗುರಿಯನ್ನು ಹೇಳುವಂತವಾಗಿವೆ. ಇವು ತೆಗೆದುಕೊಳ್ಳುವ ವ್ಯಕ್ತಿ, ವಸ್ತುವನ್ನು ಸೂಚಿಸುತ್ತದೆ. -ಕ್ಕೆ ಎಂಬ ವಿಭಕ್ತಿ ಪ್ರತ್ಯಯವು 'ಅ' ಸ್ವರದಿಂದ ಕೊನೆಗೊಳ್ಳುವ ನಾಮಪದಕ್ಕೆ ಸೇರಿ ಬರುತ್ತದೆ. ಅದೆರೀತಿಯಾಗಿ -ಗೆ ಎಂಬ ಪ್ರತ್ಯಯವು 'ಇ', 'ಉ', ಸ್ವರದಿಂದ ಮುಗಿಯುವ ನಾಮಪದಕ್ಕೆ ಹತ್ತಿ ಬಳಕೆಯಾಗುತ್ತದೆ. 'ನ' ವ್ಯಂಜನ ಆಗಮವಾಗಿ ಬರುತ್ತದೆ.

ಉದಾಹರಣೆ:

-ಇಗೆ:

ಮಗ+-ನ್-+-ಇಗೆ = ಮಗನಿಗೆ ೨.೫.೧

ಕೂಳು+-ಇಗೆ = ಕೂಳಿಗೆ ೧.೭.೧

-ಕೆ:

ಕುಲ+ಛಲ+-ಕೆ = ಕುಲಛಲಕೆ ೩೨.೪.೧

ವ್ಯರ್ಥ+-ಕೆ = ವ್ಯರ್ಥಕೆ ೭.೧೬.೧

-ಕ್ಕೆ:

ಕಂಬ+-ಕ್ಕೆ = ಕಂಬಕ್ಕೆ ೧೮.೧೨.೧

ವ್ಯಸನ+-ಕ್ಕೆ = ವ್ಯಸನಕ್ಕೆ ೩೨.೧೧.೨

-ಗೆ:

ಕುರುಡ+-ಗೆ = ಕುರುಡಗೆ ೪.೧೫.೩

ಭಕ್ತಿ+-ಗೆ = ಭಕ್ತಿಗೆ ೪.೨೬.೧

**ಪಂಚಮಿ ವಿಭಕ್ತಿ:** ಇದು ಅಪಾದಾನ ಕಾರಕವನ್ನು ಹೊಂದಿದ್ದು, -ಇಂದ, -ಲಿಂದ ಎಂಬ ವಿಭಕ್ತಿ ಪ್ರತ್ಯಯವನ್ನು ಒಳಗೊಂಡಿದೆ. ತೃತೀಯಾ ವಿಭಕ್ತಿ ಮತ್ತು ಪಂಚಮಿ ವಿಭಕ್ತಿಗೆ ಒಂದೆ ಪ್ರತ್ಯಯ ಬಳಕೆಯಾಗುತ್ತದೆ. ಒಬ್ಬ ವ್ಯಕ್ತಿ. ಒಂದು

ವಸ್ತು, ಮೂಲ ಸ್ಥಳವನ್ನು ಬಿಟ್ಟು ಹೋಗುವುದನ್ನು ಹೇಳುತ್ತದೆ. ಅಗಲಿಕೆಗೆ ಕಾರಣವಾದ ವಸ್ತು ಪಂಚಮಿ ವಿಭಕ್ತಿ ತಿಳಿದುಕೊಳ್ಳಲು ಅದು ಬಳಕೆಯಾಗುವ ಸಂದರ್ಭ ಹಾಗೂ ಕಾರಕ ಸಂಬಂಧ ಮುಖ್ಯವಾಗಿ ಕಾಣುತ್ತದೆ.

ಉದಾಹರಣೆ:

-ಇಂದ:

ತ್ಯಾಗ+ -ದ್-+ -ಇಂದ = ತ್ಯಾಗದಿಂದ ೩೦.೧೩.೧

ಯೋಗ+-ದ್-+-ಇಂದ = ಯೋಗದಿಂದ ೩೦.೧೪.೧

ರಾಗ+-ದ್-+-ಇಂದ = ರಾಗದಿಂದ 16.15.2

ಹರುಷ+-ದ್-+-ಇಂದ = ಹರುಷದಿಂದ 16.4.1

-ಲಿಂದ:

ಖುಷಿ+-ಲಿಂದ = ಖುಷಿಲಿಂದ 44.4.1.

ಚಿಂತಿ+-ಲಿಂದ-+-ಲೆ = ಚಿಂತಿಲಿಂದಲೆ 62.2.2.

**ಷಷ್ಠಿ ವಿಭಕ್ತಿ:** ಈ ವಿಭಕ್ತಿಯು ಕಾರಕ ಸಂಬಂಧವನ್ನು ಹೊಂದಿರುವುದಿಲ್ಲ. ಇದು ವಾಕ್ಯದಲ್ಲಿನ ಎರಡು ನಾಮಪದಗಳ ನಡುವೆ ಇರುವ ಸಂಬಂಧವನ್ನು ತಿಳಿಸುತ್ತದೆ. ಷಷ್ಠಿ ವಿಭಕ್ತಿಗೆ -ಅ, -ಇನ ಎಂಬ ಪ್ರತ್ಯಯಗಳು ಬಳಕೆಯಲ್ಲಿವೆ. ವಾಕ್ಯದಲ್ಲಿ ನಾಮಪದ ಮತ್ತು ಕ್ರಿಯಾಪದಕ್ಕೆ ನೇರವಾದ ಸಂಬಂಧ ಏರ್ಪಡಿಸುವುದು. ಆದ್ದರಿಂದ ಇದನ್ನು ಸಂಬಂದಾರ್ಥಕ ಎಂದು ಹೇಳುತ್ತಾರೆ. ಷಷ್ಠಿ ವಿಭಕ್ತಿ ಪ್ರತ್ಯಯದ ಕಾರಕವು ಹೊಸಗನ್ನಡದಲ್ಲಿ ಇಲ್ಲ ಎಂದು ಭಾಷಾವಿಜ್ಞಾನಿಗಳು ತಿಳಿಸುತ್ತಾರೆ.

ಉದಾಹರಣೆ:

ನರಕ+-ದ್-+-ಅ = ನರಕದ ೨.೧೮.೧

ಕೊಡಲಿ+-ಯ್-+-ಅ = ಕೊಡಲಿಯ ೧.೧೦.೨

'-ಇನ'

ಕುರುಡು+ಎತ್ತು+-ಇನ = ಕರುಡೆತ್ತಿನ ೪.೧೫.೨

ಗುರು+-ವ್-+-ಇನ = ಗುರುವಿನ ೨.೧.೧

ತಾಸು+-ಇನ = ತ್ರಾಸಿನ ೫.೬.೧

**ಸಪ್ತಮಿ ವಿಭಕ್ತಿ:** ಇದು ಅಧಿಕರಣ ಕಾರಕವನ್ನು ಹೊಂದಿದೆ. ಒಂದು ವಾಕ್ಯದಲ್ಲಿನ ಕಾರ್ಯವನ್ನು ನಡೆಯುವ ಸ್ಥಳವನ್ನು ತಿಳಿಸುವ ಪದಗಳ ಜೊತೆ ಬರುತ್ತವೆ. -ಅಲಿ, -ಅಲ್ಲಿ, -ಆಗ, -ಇಲಿ, -ಒಳು, -ಒಳಗೆ, ಎಂಬ ಸಪ್ತಮಿ ವಿಭಕ್ತಿ ಪ್ರತ್ಯಯಗಳು ತತ್ಸಪದಗಳಲ್ಲಿ ಬಳಕೆಯಾಗಿವೆ. ಈ ವಿಭಕ್ತಿ ಪ್ರತ್ಯಯದಲ್ಲಿ ಬಂದ ರೂಪಗಳು ನೆಲೆಯನ್ನು ಸೂಚಿಸುತ್ತವೆ.

ಉದಾಹರಣೆ:

-ಅಲಿ

ಜಲ್ಮ+-ದ್- + -ಅಲಿ = ಜನ್ಮದಲಿ ೩೬.೩.೨

ಪಾದ+-ದ್-+-ಅಲಿ = ಪಾದದಲಿ ೩೬.೪.೫

ದೊರೆ+ತನ+-ದ್-+-ಅಲಿ = ದೊರೆತನದಲಿ ೪.೧೩.೧

-ಅಲ್ಲಿ

ಕಾಲ+-ದ್-+-ಅಲ್ಲಿ = ಕಾಲದಲ್ಲಿ ೧೧.೧೦.೨

ಜನ್ಮ+-ದ್-+-ಅಲ್ಲಿ = ಜನ್ಮದಲ್ಲಿ ೧೨.೧೨.೨

ಶಿವಪುರ+-ದ್-+-ಅಲ್ಲಿ = ಶಿವಪುರದಲ್ಲಿ ೧೪.೧೩.೩

-ಆಗ:

ಗುಡ್ಡ+-ದ್-+-ಆಗ = ಗುಡ್ಡದಾಗ ೩೯.೧೪.೩

-ಇಲಿ

ಬಾಯಿ+-ಇಲಿ = ಬಾಯಿಲಿ 00.5.2

-ಒಳು'

ಸಂತ+-ರು-+-ಒಳು = ಸಂತರೊಳು ೧೨.೧೫.೨

ದಳ+-ದ್-+-ಒಳು = ದಳದೊಳು 16.10.5

-ಒಳಗೆ

ಬೈಲು+-ಇನ-+-ಒಳಗೆ = ಬೈಲಿನೊಳಗೆ 20.10.1.

ಈ ಲೇಖನದ ತತ್ವಪದಗಳಲ್ಲಿ ಬಳಕೆಯಾದ ವಿಭಕ್ತಿ ರೂಪಗಳನ್ನು ಗುರುತಿಸಿ ತೋರಿಸಲಾಗಿದೆ. ಇದು ಸ್ಥಳಿಯ ಭಾಷೆಯ ಅಂಶಗಳನ್ನು, ಆ ಕಾಲದ ಭಾಷೆ ಮತ್ತು ಸಮಾಜವನ್ನು ಅರಿತುಕೊಳ್ಳಲು ನೆರವಾಗುತ್ತದೆ. ಇನ್ನು ಹೆಚ್ಚಿನ ಅಧ್ಯಯನ ಮೂಲಕ ಈ ಭಾಷೆಯ ರಚನೆ, ಅದರ ಐತಿಹಾಸಿಕ ಭಾಷೆಯ ಬೆಳವಣಿಗೆಯನ್ನು ತಿಳಿದುಕೊಳ್ಳಲು ಸಹಾಯಕವಾಗುತ್ತದೆ. ಹೀಗೆ ತತ್ವಪದ ಅಧ್ಯಯನ ಮಾಡುವುದರಿಂದ ಆ ಕಾಲದ ಜನರು ಬಳಿಸಿದ ಭಾಷೆಯು ಭಿನ್ನವಾಗಿತ್ತು ಎಂದು ಹೇಳಲು ಸಾಧ್ಯವಿದೆ.

**ಆಕರಸೂಚಿ:**

ಕುಳ್ಳಿ.ಜೆ.ಎಸ್.೨೦೧೯.ವರ್ಣನಾತ್ಮಕ ಭಾಷಾವಿಜ್ಞಾನ, ಅಂಬಾರಿ ಎಂಟರ್ ಪ್ರೈಸಸ್.

ಕೆಂಪೇಗೌಡ.ಕೆ. ೨೦೦೮. ವಿವರಣಾತ್ಮಕ ಭಾಷಾ ವಿಜ್ಞಾನ ಗಜಾನನ ಪಬ್ಲಿಕೇಷನ್ ಮೈಸೂರು.

ಕೋಡಗುಂಟಿ ಬಸವರಾಜ. ೨೦೧೧. ಕನ್ನಡ ವಿಬಕ್ತಿ ರೂಪಗಳ ಆಯ್ತಿಹಾಸಿಕ ಬೆಳವಣಿಗೆ ಬಂಡಾರ ಪ್ರಕಾಶನ ಮಸ್ಕಿ

ಪುಟ್ಟಪ್ಪ.ಕೆ.ವಿ. ೧೯೨೭ ಕನ್ನಡ ಕೈಪಿಡಿ ಪ್ರಸಾರಾಂಗ ಮೈಸೂರು ವಿಶ್ವವಿದ್ಯಾನಿಲಯ ಮೈಸೂರು.

ಭಟ್ ಶಂಕರ.ಡಿ.ಎನ್. ೨೦೧೧. ಕನ್ನಡಕ್ಕೆ ಬೇಕು ಕನ್ನಡದ್ದೇ ವ್ಯಾಕರಣ ಭಾಷಾ ಪ್ರಕಾಶನ ಆರಗ ತೀರ್ಥಹಳ್ಳಿ,

ಭಟ್ ಶಂಕರ ಡಿ.ಎನ್. ೨೦೧೨. ಕನ್ನಡ ವಾಕ್ಯಗಳ ಒಳರಚನೆ ಭಾಷಾ ಪ್ರಕಾಶನ, ಹೆಗ್ಗೋಡು ಸಾಗರ.

ಮಹೇಶ್ವರಯ್ಯ ರಾಜೇಶ್ವರಿ, ೧೯೮೭.ಆಧುನಿಕ ವರ್ಣನಾತ್ಮಕ ಭಾಷಾವಿಜ್ಞಾನ, ಸಮಾಜ ಪುಸ್ತಕಾಲಯ ಅರಗ ತೀರ್ಥಹಳ್ಳಿ

ಶ್ರೀಕಂಠಯ್ಯ.ತೀ.ನಂ.೨೦೨೩. ಕನ್ನಡ ಮಧ್ಯಮ ವ್ಯಾಕರಣ ಗೀತಾ ಬುಕ್ ಹೌಸ್ ಪ್ರಕಾಶಕರು ಮೈಸೂರು.

ಸವದತ್ತಿಮಠ ಸಂಗಮೇಶ. ೨೦೨೧. ಹೊಸ ಕನ್ನಡ ಭಾಷಾವ್ಯಾಸಂಗ ರೂಪರಕ್ಕೆ ಪಬ್ಲಿಕೇಶನ್ ಧಾರವಾಡ,

# YOUR DISSERTATION DESERVES RECOGNITION, NOT A PLACE IN A STOREROOM

**Publish Your Dissertation as a Book through the Emerging Scholars Series**

Transform your thesis or dissertation into a professionally published scholarly work, boosting its academic visibility and impact.

**Benefits**

- 📚 ISBN Registration*
- 🆔 Crossref DOI Assignment
- 🟢 ORCID Integration
- 🎓 Google Scholar Discoverability
- 📈 Enhanced Citation Opportunities
- 🌍 Wider Academic Reach and Recognition
- 🔒 Long-Term Preservation and Accessibility

**Publication Options**

| Jnanasetu Repository | Jnanasetu Repository Publication with an ISBN |
|---|---|
| ✓ Crossref DOI Assignment<br>✓ Online Archiving and Preservation<br>✓ Academic Visibility<br>✓ Citations | ✓ ISBN Registration<br>✓ Crossref DOI Assignment<br>✓ Professional Book Publication<br>✓ Global Accessibility<br>✓ Academic Visibility<br>✓ Citations |

## Looking to Publish Research Articles?

Researchers and scholars may also submit manuscripts to **Jnanasetu Journals** for quality-focused scholarly publication.

✓ Peer-Reviewed Journals
✓ DOI Assignment
✓ Open Access Publishing
✓ Academic Visibility
✓ Timely Editorial Processing

**We Also Publish**

- 📖 Edited Books
- 📚 Scholarly Monographs
- 📝 Conference Proceedings
- 🔬 Academic Journals

**For more details:**

| | | |
|---|---|---|
| **Press** | jnanasetupress.com | support@jnanasetupress.com |
| **Repository** | jnanaseturepository.com | editor@jnanaseturepository.com |
| **Journals** | jnanasetujournals.com | editor@jnanasetujournals.com |